<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಭ್ರಷ್ಟಾಚಾರ ನಿಗ್ರಹ ಪ್ರಕರಣಗಳ ಅಧಿವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (P.C.) 09/2014**

ಫ್ರಾಸಾಃ **13** ಚಾಸಾಃ **30**
ದಿನಾಂಕಃ **08-04-2026**

| | |
|---|---|
| ಹೆಸರು | :: ಶ್ರೀಮತಿ ಎನ್ ರುಕ್ಮಿಣಿ |
| ಗಂಡನ ಹೆಸರು | :: ರಾಮಕೃಷ್ಣಪ್ಪ |
| ವಯಸ್ಸು | :: 45 ವರ್ಷ |
| ಉದ್ಯೋಗ | :: ಗುತ್ತಿಗೆ ನೌಕರರು, ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ, |
| ವಾಸ ಸ್ಥಳ | :: ಕೋಲಾರ |

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಗಕರಿಂದಃ</u>

1. ನಾನು 2001-02 ನೇ ಸಾಲಿನಿಂದ ಕೋಲಾರದ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ದಿನಗೂಲಿ ನೌಕರಳಾಗಿ ಕೆಲಸ ಮಾಡುತ್ತಿದ್ದೇನೆ. ಮೊದಲು 5 ವರ್ಷ ಟೈಪಿಸ್ಟ್ ಎಂದು ಕೆಲಸ ಮಾಡುತ್ತಿದ್ದೆ. ನಂತರ ಸದರಿ ಕಛೇರಿಯಲ್ಲಿ ಸ್ಕಾಲರ್ ಶಿಪ್ ಸೆಕ್ಷನ್ ನಲ್ಲಿ ಮೇಲಾಧಿಕಾರಿಗಳು ಹೇಳಿದ ಕೆಲಸವನ್ನು ಮಾಡುತ್ತಿದ್ದೇನೆ. ಬರೆಯುವ ಕೆಲಸವನ್ನು ಮಾಡಿಸುತ್ತಿದ್ದರು. ಈಗಲೂ ಅದೇ ಕಛೇರಿಯಲ್ಲಿ ಮೇಲಾಧಿಕಾರಿಗಳು ಹೇಳಿದ ಕೆಲಸವನ್ನು ಮಾಡುತ್ತಿದ್ದೇನೆ.

2. ಈಗ ತೋರಿಸಿದ ದಾಖಲೆಯಲ್ಲಿ ಮೊತ್ತವನ್ನು ಅಂಕಿಗಳಲ್ಲಿ ಮತ್ತು ಅಕ್ಷರಗಳಲ್ಲಿ ನಾನು ಬರೆದಿದ್ದೇನೆ. ಸಾಕ್ಷಿಗೆ ತೋರಿಸಿದ ಸದರಿ ದಾಖಲೆಯನ್ನು ನಿ ಪಿ 551 ಎಂದು ಗುರುತಿಸಲಾಯಿತು. ತಮ್ಮ ಬರವಣಿಗೆ ಎಂದು ಹೇಳಿದ ಸದರಿ ಭಾಗವನ್ನು ನಿ ಪಿ 551(ಎ) ಎಂದು ಗುರುತಿಸಲಾಯಿತು. 3 ನೇ ಆರೋಪಿ ನಾಗರತ್ನಮ್ಮ ಹೇಳಿದ ಮೇರೆಗೆ ನಾನು ನಿ ಪಿ 551(ಎ) ರಂತೆ ಬರೆದಿದ್ದೇನೆ. 3 ನೇ ಆರೋಪಿಯು ಆಗ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ನಿ ಪಿ 551(ಎ) ರಂತೆ ನಾನು ಬರೆದಾಗ ಅದಕ್ಕೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಸಹಿಗಳು, ಸೀಲು ಇರಲಿಲ್ಲ. ಮೊತ್ತದ ಪಕ್ಕದಲ್ಲಿ ಹಸಿರು ಶಾಹಿಯಿಂದ ಬರೆದ ಬರವಣಿಗೆ ಸಹಾ ಇರಲಿಲ್ಲ.

3. ಈಗ ತೋರಿಸಿದ ದಾಖಲೆಯಲ್ಲಿ ನೀಲಿ ಶಾಹಿಯಿಂದ ಬರೆದ ಎಲ್ಲಾ ಬರವಣಿಗೆಗಳು ನನ್ನದೇ ಇವೆ. (ಮಹಜರು ಸಾಕ್ಷಿದಾರರ ಸಹಿಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಬರವಣಿಗೆ ತಮ್ಮದಿದೆ ಎಂದು ಗುರುತಿಸಿರುತ್ತಾರೆ.) ಸಾಕ್ಷಿಗೆ ತೋರಿಸಿದ ದಾಖಲೆ ನಿ ಪಿ 235 ರ ಭಾಗವಾದ ಕಛೇರಿ ಆದೇಶ ಮತ್ತು ಅನುಬಂಧ – ಅ ಎಂಬ ದಾಖಲೆ ಇದೆ. ಅದನ್ನು ನಿ ಪಿ 235(ಬಿ) ಎಂದು ಗುರುತಿಸಲಾಯಿತು. ನಿ ಪಿ 235(ಬಿ) ದಾಖಲೆಯಲ್ಲಿ ನಾನು ಬರವಣಿಗೆ ಮಾಡಿದಾಗ ಅದರಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ಇವರ ಸಹಿಗಳು ಇರಲಿಲ್ಲ ಮತ್ತು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಸೀಲುಗಳೂ ಸಹಾ ಅದಕ್ಕೆ ಇರಲಿಲ್ಲ. ಸದರಿ ಬರವಣಿಗೆಗಳನ್ನೂ ಸಹಾ 3 ನೇ ಆರೋಪಿ ಹೇಳಿದ ಮೇರೆಗೆ ಬರೆದಿದ್ದೇನೆ.

4. ಈಗ ತೋರಿಸಿದ ಬಿಲ್ ನಲ್ಲಿನ ಕೆಲವು ಬರವಣಿಗೆಗಳು ನನ್ನ ಹಸ್ತಾಕ್ಷರದಲ್ಲಿವೆ. ಸಾಕ್ಷಿಗೆ ತೋರಿಸಿದ ಸದರಿ ದಾಖಲೆ ಟೋಕನ್ ನಂಃ 428917 ಗೆ ಸಂಬಂಧಿಸಿದ ಬಿಲ್ ಇದೆ. ಸದರಿ ಟೋಕನ್, ಬಿಲ್ಲು, ಹಣ ಸಂದಾಯ ರಸೀದಿ, ಕಛೇರಿಯ ಆದೇಶ ಇವುಗಳನ್ನು ನಿ ಪಿ 236 ರ ಭಾಗವಾಗಿ ಈಗಾಗಲೇ ಗುರುತಿಸಲಾಗಿದೆ. ಸದರಿ ಬಿಲ್ಲನ್ನು ನಿ ಪಿ 236(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ತಮ್ಮ ಬರವಣಿಗೆಯಲ್ಲಿರುವುದು ಎಂದು ಸಾಕ್ಷಿದಾರರು ಗುರುತಿಸಿದ ಭಾಗಗಳನ್ನು ಹಸಿರು ಶಾಹಿಯಲ್ಲಿ ಗುರುತು ಮಾಡಲಾಯಿತು. ಸದರಿ ಬರವಣಿಗೆಗಳು ನಿ ಪಿ 236(ಬಿ) ಯ ಎರಡೂ ಬದಿಗೆ ಇವೆ. ಸದರಿ ಬರವಣಿಗೆಗಳನ್ನು ನಾನು ಬರೆದಾಗ ಅದಕ್ಕೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಸೀಲು ಮತ್ತು ಸಹಿಗಳು ಇರಲಿಲ್ಲ. ಸದರಿ ನಿ ಪಿ 236 ರ ಭಾಗವಾದ ಕಛೇರಿ ಆದೇಶ ಮತ್ತು ಅನುಬಂಧ – ಅ ದಾಖಲೆಯನ್ನು ನೋಡಿ ಅದರಲ್ಲೂ ಸಹಾ ನನ್ನ ಬರವಣಿಗೆ ಇದೆ ಎಂದು ಸಾಕ್ಷಿದಾರರು ತಿಳಿಸುತ್ತಾರೆ. ಅವರು ತಮ್ಮದೆಂದು ಹೇಳಿದ ಬರವಣಿಗೆಯ ಭಾಗಗಳನ್ನು ಹಸಿರು ಶಾಹಿಯಿಂದ ಗುರುತು ಮಾಡಲಾಗಿದೆ. ಸದರಿ ದಾಖಲೆಯನ್ನು ನಿ ಪಿ 236(ಸಿ) ಎಂದು ಗುರುತಿಸಲಾಯಿತು. ಸದರಿ ಬರವಣಿಗೆಗಳನ್ನು ನಾನು ಬರೆದಾಗ ಅದಕ್ಕೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಸೀಲು ಮತ್ತು ಸಹಿಗಳು ಇರಲಿಲ್ಲ. ಈ ಎಲ್ಲಾ ಬರವಣಿಗೆಯನ್ನು ಬರೆಯುವಂತೆ ಹೇಳಿದ್ದು 3 ನೇ ಆರೋಪಿ ನಾಗರತ್ನಮ್ಮ.

5. ನಿ ಪಿ 237 ರ ಭಾಗವಾದ ಕಛೇರಿ ಆದೇಶ ಮತ್ತು ಅನುಬಂಧ – ಅ ದಾಖಲೆಯನ್ನು ನೋಡಿ ಅದರಲ್ಲಿ ತಮ್ಮ ಬರವಣಿಗೆಗಳು ಇವೆ ಎಂದು ಸಾಕ್ಷಿದಾರರು ಗುರುತಿಸುತ್ತಾರೆ. ಅವರು ಗುರುತಿಸಿದ ಬರವಣಿಗೆಯ ಭಾಗಗಳನ್ನು ಹಸಿರು ಶಾಯಿಂದ ಗುರುತು ಮಾಡಲಾಯಿತು. ಸದರಿ ದಾಖಲೆಯನ್ನು ನಿ ಪಿ 237(ಬಿ) ಎಂದು ಗುರುತಿಸಲಾಯಿತು. ಸದರಿ

ಬರವಣಿಗೆಗಳನ್ನು ನಾನು ಬರೆದಾಗ ಅದರಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಸಹಿಗಳು ಇರಲಿಲ್ಲ. ಅದರಲ್ಲಿರುವ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಸಹಿಗಳು 1 ನೇ ಆರೋಪಿಯದ್ದು ಇವೆ. ಈ ಬರವಣಿಗೆಗಳನ್ನೂ ಸಹಾ ಬರೆಯುವಂತೆ ಹೇಳಿದ್ದು 3 ನೇ ಆರೋಪಿ ನಾಗರತ್ನಮ್ಮ.

6. ನಿ ಪಿ 238 ರ ಭಾಗವಾದ ಕಛೇರಿ ಆದೇಶ ಮತ್ತು ಅನುಬಂಧ – ಅ ದಾಖಲೆಯನ್ನು ನೋಡಿ ಅದರಲ್ಲಿ ತಮ್ಮ ಬರವಣಿಗೆಗಳು ಇವೆ ಎಂದು ಸಾಕ್ಷಿದಾರರು ಗುರುತಿಸುತ್ತಾರೆ. ಅವರು ಗುರುತಿಸಿದ ಬರವಣಿಗೆಯ ಭಾಗಗಳನ್ನು ಹಸಿರು ಶಾಯಿಂದ ಗುರುತು ಮಾಡಲಾಯಿತು. ಸದರಿ ದಾಖಲೆಯನ್ನು ನಿ ಪಿ 238(ಬಿ) ಎಂದು ಗುರುತಿಸಲಾಯಿತು. ಸದರಿ ಬರವಣಿಗೆಗಳನ್ನು ನಾನು ಬರೆದಾಗ ಅದರಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಸಹಿಗಳು ಇರಲಿಲ್ಲ. ಅದರಲ್ಲಿರುವ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಸಹಿಗಳು 1 ನೇ ಆರೋಪಿಯದ್ದು ಇವೆ. ಈ ಬರವಣಿಗೆಗಳನ್ನೂ ಸಹಾ ಬರೆಯುವಂತೆ ಹೇಳಿದ್ದು 3 ನೇ ಆರೋಪಿ ನಾಗರತ್ನಮ್ಮ.

7. ದಿನಾಂಕ 12.12.2012 ರಂದು ತನಿಖಾಧಿಕಾರಿಯವರು ಲೋಕಾಯುಕ್ತ ಕಛೇರಿಗೆ ನನ್ನನ್ನು ಕರೆಸಿದ್ದರು. ಆಗ ನನ್ನ ಬರವಣಿಗೆಗಳನ್ನು 8 ಪುಟಗಳಲ್ಲಿ ಪಡೆದಿದ್ದಾರೆ. ಸದರಿ ಬರವಣಿಗೆಗಳು ಈಗ ತೋರಿಸಿದ್ದಿವೆ. ಸದರಿ ಬರವಣಿಗೆಗಳನ್ನು ಈಗಾಗಲೇ ನಿ ಪಿ 224 ರಿಂದ 231 ರವರೆಗೆ ಗುರುತಿಸಲಾಗಿದೆ. ಆ ಸಮಯದಲ್ಲಿ ಈಗ ತೋರಿಸಿದ ನಿ ಪಿ 223 ರಂತೆ ಮಹಜರು ಮಾಡಿದ್ದಾರೆ. ನಿ ಪಿ 223 ರಲ್ಲಿನ ಸಾಕ್ಷಿದಾರರ ಸಹಿಯನ್ನು ನಿ ಪಿ 223(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಪಿ.ಎನ್.ಕೆ ವಕೀಲರಿಂದಃ</u>

8. ನನ್ನ ಸಂಬಳವನ್ನು ಸಮಾಜ ಕಲ್ಯಾಣ ಇಲಾಖೆಯವರು ನೀಡುತ್ತಾರೆ. 2011-12 ನೇ ಸಾಲಿನಲ್ಲಿ ಕೋಲಾರ ತಾಲ್ಲೂಕು ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಖಾಯಂ ನೌಕರರು ಎಷ್ಟು ಜನ ಇದ್ದರು ಎಂದರೆ ಸಾಕ್ಷಿದಾರರು ಪ್ಯೂನ್ ಮಂಜುನಾಥ, ತಾಲ್ಲೂಕು ಅಧಿಕಾರಿಯಾದ 1 ನೇ ಆರೋಪಿ ಫಾರುಕ್ ಸುಲ್ತಾನಾ ಮತ್ತು ದ್ವಿತೀಯ ದರ್ಜೆ ಸಹಾಯಕರಾಗಿದ್ದ 3 ನೇ

ಆರೋಪಿ ನಾಗರತ್ನಮ್ಮ ಇದ್ದರು ಎನ್ನುತ್ತಾರೆ. ದಿನಗೂಲಿಯಾಗಿ ಕಂಪ್ಯೂಟರ್ ಆಪರೇಟರ್ ಆದ ವರಲಕ್ಷ್ಮಿ, ನಾನು, ಸೋಮನಾಥ್ ಎಂಬ ಒಬ್ಬ ಹುಡುಗ ಮತ್ತು ಶಾಂತಮ್ಮ ಎಂಬುವವರು ಇದ್ದರು.

9. ನಿ ಪಿ 551(ಎ), ನಿ ಪಿ 235(ಬಿ), ನಿ ಪಿ 236(ಬಿ), ನಿ ಪಿ 236(ಸಿ), ನಿ ಪಿ 237(ಬಿ), ನಿ ಪಿ 238(ಬಿ) ಇವುಗಳಲ್ಲಿನ ಬರವಣಿಗೆಗಳನ್ನು 3 ನೇ ಆರೋಪಿ ನಾಗರತ್ನಮ್ಮ ಇವರು ಹೇಳಿದಂತೆ ಬರೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 224 ರಿಂದ 231 ರಂತೆ ಲೋಕಾಯುಕ್ತ ಕಛೇರಿಯಲ್ಲಿ ನನ್ನ ಬರವಣಿಗೆಗಳನ್ನು ಪಡೆಯುವಾಗ ನಾನು ನಿ ಪಿ 551(ಎ), ನಿ ಪಿ 235(ಬಿ), ನಿ ಪಿ 236(ಬಿ), ನಿ ಪಿ 236(ಸಿ), ನಿ ಪಿ 237(ಬಿ), ನಿ ಪಿ 238(ಬಿ) ಇವುಗಳಲ್ಲಿ ಬರವಣಿಗೆ ಮಾಡಿದ್ದೇನೆ ಎಂದರೆ ಸರಿಯಲ್ಲ.

10. ಕಛೇರಿಯಲ್ಲಿ 3 ನೇ ಆರೋಪಿಯು ಟಪಾಲ್ ಸೆಕ್ಷನ್ ನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 3 ನೇ ಆರೋಪಿಗೆ ಅಕೌಂಟ್ ಸೆಕ್ಷನ್ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿಯು ನನಗೆ ಏನನ್ನೂ ಹೇಳಿ ಬರೆಸದೇ ಇದ್ದರೂ ಸಹಾ ಲೋಕಾಯುಕ್ತ ಪೋಲೀಸರ ಮಾತುಕೇಳಿ ಆಕೆ ಹೇಳಿದಂತೆ ಬರೆದಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 1, 5, 6 ಮತ್ತು 7 ನೇ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಈ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ